ತಮ್ಮಂದಿರೆಲ್ಲ ಅಪ್ಪ ಅಮ್ಮಂದಿರನ್ನು, ಅತ್ತೆ ಮಾವರನ್ನು ತಮ್ಮ ತಮ್ಮ ಕಾರುಗಳಲ್ಲಿ ಕೂರಿಸಿಕೊಂಡು ಕೈ ಬೀಸಿದರು. ಬಾಯುಪಚಾರಕ್ಕಾದರೂ "ಬರ್ತೀಯೇನೆ?" ಅನ್ನಲಿಲ್ಲ. ಅನ್ನುವುದಾದರೂ ಹೇಗೆ? ಅವಳ ಮನೆ ಒಂದು ದಿಕ್ಕಾದರೆ ಇವರ ಮನೆ ಇನ್ನೊಂದು ದಿಕ್ಕು. ಅಕ್ಕಪಕ್ಕ ನಿಂತಿದ್ದ ನೆಂಟರೊಂದಿಗೆ, "ಅವರು ಹೇಳಿದರೆ ಹೇಳಲಿ, ನಾನೆಲ್ಲಿ ಬಸ್ಸಿಗೆ ಕಾಯಲಿ? ಆಟೋಕ್ಕೆ ಹೋಗಿಬಿಡುತ್ತೇನೆ" ಎಂದು ಪರ್ಸು ಸರಿಯಾಗಿ ಹೆಗಲಿಗೆ ತೂಗುಹಾಕಿಕೊಂಡಳು. ಮುಂದೆ ಹೋಗುತ್ತಿದ್ದ ಶಿವಾನಂದ ಸ್ಕೂಟಿಯನ್ನು ತಿರುಗಿಸಿಕೊಂಡು ಬಂದವನೇ "ನೂರೈದರ ಬಸ್ಸು ಬರುತ್ತಿದೆ. ಬೇಗ ಬಾ" ಎಂದವನೇ ಬಸ್ಸಿಗೆ ಕೈ ಮಾಡಿ ನಿಲ್ಲಿಸಿಬಿಟ್ಟ. ಉಪಾಯವಿಲ್ಲದೇ ಅವಳು ಒಳಗೆ ತೂರಿದಳು. ನಂತರ ಅವನೂ ಗಾಡಿ ಬಿಟ್ಕೊಂಡು ಹೊರಟಿದ್ದಾಯಿತು.

ಅಂದಿನಿಂದಲೇ ಆರಂಭವಾಯಿತು ಕಾರಿನ ವರಾತ. ದಾಕ್ಷಾಯಿಣಿಗೆ ಕಾರಿನ ಭೂತ ಬೆನ್ನಟ್ಟಿತೆಂದೇ ಹೇಳಬೇಕು. ಕೂತರೆ, ನಿಂತರೆ, ಮಲಗಿದರೆ ಕಾರು... ಕಾರು... ಕಾರು. ಉಂಡದ್ದೆಲ್ಲ ಕಾರುವಂತಾಯ್ತು ಶಿವಾನಂದನಿಗೆ. "ಇನ್ನೂ ಈ ಸ್ಕೂಟಿಯ ಸಾಲ ತೀರಿಲ್ಲ. ಕಾರು ಹೇಗೆ ಕೊಳ್ಳಿ? ಸ್ವಲ್ಪ ದಿನ ತಡೀಬಾರ್ದ? ಈಗೇನಂಥಾ ಅವಸರ?"ಎಂದೆಲ್ಲಾ ಕೇಳಿದ್ದಾಯ್ತು. "ಕಾರು ಕೊಂಡ ಮೇಲೆ ಹಾಗೇ ಆಗುತ್ತಾ? ಇಡ್ಲಿಕ್ಕೆ ಜಾಗ ಬೇಡ್ವಾ? ಅದು ಸುಮ್ಮನೆ ಓಡುತ್ತ? ಪೆಟ್ರೋಲು ಸುರೀಬೇಕು ಅದಕ್ಕೆ" ಇತ್ಯಾದಿಯಾಗಿ ಅನುನಯಿಸಲು ನೋಡಿದ. ಆದರೆ ದಾಕ್ಷಾಯಿಣಿ ಕೇಳಿದರೆ ತಾನೇ. ಹಿಡಿದದ್ದೇ ಹಟ. ಪೌರಾಣಿಕ ದಾಕ್ಷಾಯಿಣಿ ಶಿವನನ್ನು ಹಟದಿಂದ ಒಪ್ಪಿಸಿ ಹೊರಟಳಂತೆ. ಇನ್ನು ಕಲಿಯುಗದ ದಾಕ್ಷಾಯಿಣಿ, "ಏನೇ ಆಗಲಿ, ನೀಲೇಶನ ಮಗನ ಬರ್ತಡೇಗೆ ನಾವು ನಮ್ಮ ಹೊಸ ಕಾರಲ್ಲೇ ಹೋಗೋದು" ಎಂದು ಫರ್ಮಾನು ಹೊರಡಿಸಿದಳು. ಆಯ್ತಲ್ಲ... ಮತ್ತಿನ್ನೇನು? ಕೊನೆಗೆ ಮಾಮೂಲಿನಂತೆ ಶಿವಾನಂದ ಸೋತ. ಸ್ನೇಹಿತನೊಂದಿಗೆ ಶೋರೂಮಿಗೆ ಹೋಗಿ ರೇಟು ಕೇಳಿ ಚೌಕಾಸಿ ಮಾಡಿಕೊಂಡು ಬಂದ. ತನ್ನ ಬ್ಯಾಂಕಿನಲ್ಲಿ ಸಾಲಕ್ಕೆ ಅರ್ಜಿ ಹಾಕಿ ಕೆಂಗಣ್ಣಿನ ಮ್ಯಾನೇಜರ್ ಮುಂದೆ ತಲೆ ತಗ್ಗಿಸಿ ನಿಂತ. "ಏನ್ರೀ, ಸಾಲವಿಲ್ಲದೆ ಎಂದಾದರೂ ಹಾಗೇ ಇದೀರಾ? ಹೋಗಲಿ ಅಂದ್ರೆ ಸರಿಯಾಗಿ ಕಟ್ಟುವುದೂ ಇಲ್ಲ. ನಮ್ಮದೇ ಸ್ಟಾಫ್. ಏನ್ಹೇಳೋದು?" ಎಂದು ಕೂಗಾಡಿದರು. "ಸಾರಿ ಸರ್, ಈ ಬಾರಿಯಿಂದ ಸರಿಯಾಗಿ ಕಟ್ತೀನಿ. ಒಂದು ಬಾರಿಯೂ ತಪ್ಪದಂತೆ..." ಎಂದು ಉಗುಳು ನುಂಗಿದ. ಹರ ಸಾಹಸಪಟ್ಟು ಮಂಜೂರು ಮಾಡಿಸಿಕೊಂಡು ಗೆದ್ದವರಂತೆ ಮನೆಗೆ ಬಂದ.

ನಿಜವಾಗಿ ಹೇಳಬೇಕೆಂದರೆ ಶಿವಾನಂದ ಬಹಳ ಸಾಧು. ಎಲ್ಲರ ದೃಷ್ಟಿಯಲ್ಲಿ ದೇವರಂಥ ಮನುಷ್ಯ. ಡಿ.ಸಿ.ಸಿ.ಬ್ಯಾಂಕಿನಲ್ಲಿ ಗುಮಾಸ್ತೆಯ ಕೆಲಸ. ಸಾಧಾರಣ ಸಂಬಳ. ಹೇಳಿಕೊಳ್ಳುವಂಥ ಆಸ್ತಿಯೇನಿಲ್ಲ. ಬಂಧುವರ್ಗವೂ ಕಡಿಮೆ. ಕಟ್ಟುಮಸ್ತಾದ ಶರೀರ. ಸುಂದರ ರೂಪದೊಂದಿಗೆ ಒಮ್ಮೆ ತಿರುಗಿ ನೋಡಬೇಕೆನ್ನಿಸುವಂಥ ಮುಗುಳ್ನಗೆ. ಮಠದ ಸ್ವಾಮಿಗಳ ಭಕ್ತ. ಅವರಿಗೂ ಇವನ ಮೇಲೆ ಬಹಳ ವಿಶ್ವಾಸ. ಹಾಗೇ ಪತ್ರಿಮಠ ವಕೀಲರೂ ಅವರ ವಿಶ್ವಾಸಕ್ಕೆ ಪಾತ್ರರಾದವರೇ. ಸಾಲಾಗಿ ಮೂರು ಹೆಣ್ಣು ಮಕ್ಕಳು. ನಂತರದ ಕುಲಪುತ್ರ ನೀಲೇಶ. ಹಿರಿಯವಳು ದಾಕ್ಷಾಯಿಣಿ. ಎಣ್ಣೆಗೆಂಪು ಬಣ್ಣ, ಮೋಟು ಜಡೆ, ಕೊಂಚ ಕುಳ್ಳು ಎನ್ನಬಹುದು. ಇದೆಲ್ಲ ಪರವಾಗಿಲ್ಲವೆಂದರೂ ನಾನೊಂದು ತೀರ, ನೀನೊಂದು ತೀರ ಎನ್ನುವಂತಿದ್ದ ಕಣ್ಣುಗಳು ಅವಳನ್ನು ಕುರೂಪಿಯರ ಸಾಲಿನಲ್ಲಿ ನಿಲ್ಲಿಸಿದ್ದವು. ತಿರಸಗಣ್ಣು ನೋಡಿ ಬಂದವರೆಲ್ಲ ದಾರಿಗೆ ಸುಂಕವಿಲ್ಲದಂತೆ ವಾಪಸ್ಸಾಗಿದ್ದರು. ಓದೂ ಅಷ್ಟಕ್ಕಷ್ಟೆ. ವಕೀಲರ ಹಣೆಯಲ್ಲಿ ನೆರಿಗೆಗಳು ಹೆಚ್ಚುತ್ತಲೇ ಹೋದವು.

ದಾಕ್ಷಾಯಿಣಿಯ ಇಬ್ಬರು ತಂಗಿಯರಿಗೂ ಹರೆಯ ಉಕ್ಕಿ ಬಂದಿತ್ತು. ಡಿಗ್ರಿ ಕಾಲೇಜಿನಲ್ಲಿ